(2) ದರ್ಯಾಫ್ತ್ ಮಾಡಲಿಕ್ಕೆ ಅವರಿಗೆ ಅಧಿಕಾರವಿರುವ ಮೊಕದ್ದಮೆಗಳಲ್ಲಿ ತಕರೀರುಗಳ ಬಾಬತು ಫಿರ್ಯಾದುಗಳನ್ನು ಹಿಡಿಯುವದಕ್ಕೆ ಅಧಿಕಾರ, (141ನೇ ಸೆಕ್ಷನ್.)

(3) ಅತಂಕ ಮುಂತಾದ್ದನ್ನು ಅಡ್ಡೀಮಾಡುವದಕ್ಕೆ ಹುಕ್ಕುಂ ಮಾಡುವ ಅಧಿಕಾರ (518ನೇ ಸೆಕ್ಷನ್.)

(4) ಹೇಸಿಕೆಗಳು ಬಾರ್‌ಬಾರ್ ನಡಿಯದಂತೆ ಅಡ್ಡೀಮಾಡುವದಕ್ಕೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (519ನೇ ಸೆಕ್ಷನ್.)

ತಾರೀಖು 27ನೇ ಮಾರ್ಚೀ 1884.

ಮಂಡ್ಯದ ಆಕ್ಟಿಂಗ್ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಶಂಕಟರಾಯರಿಗೆ ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 23ನೇ ಸೆಕ್ಷನ್ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ:—

1. ಲಾಷ್ ವಿಚಾರಣೆ ಬಗ್ಯೆ ಅಧಿಕಾರ, (ಸೆಕ್ಷನ್ 135)

2. ಅವರಿಗೆ ದರ್ಯಾಫ್ತ್ ಮಾಡುವಕ್ಕೆ ಅಧಿಕಾರವಿರುವ ಮೊಕದ್ದಮೆಗಳಲ್ಲಿ ತಕರೀರುಗಳ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳುವ ಬಗ್ಯೆ ಅಧಿಕಾರ (ಸೆಕ್ಷನ್ 141.)

(3) ನಿರೋಧವನ್ನು ಅಡ್ಡೀಪಡಿಸುವದಕ್ಕೆ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ, (ಸೆಕ್ಷನ್ 518.)

(4) ಹೇಸಿಗೆಯು ಬಾರ್ ಬಾರ್ ನಡಿಯದಂತೆ ಅಡ್ಡೀಪಡಿಸುವದಕ್ಕೆ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ, (ಸೆಕ್ಷನ್ 519.)

ಅಬ್ದುಲ್‌ಖಾದರ್, ಕೆ: ಬಿ,
ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ನೋಟೀಸ್.

ಕೋಲಾರ ದೊಡ್ಡಪ್ಯಾಟೆ ಸಾಹುಕಾರ್ ಬ್ಯಾಂಕ್ ಲಿಮಿಟೆಡ್‌ನಿಂದ.

ತಾರೀಖು 26ನೇ ಮಾರ್ಚೀ 1884.

ಸರ್ವಜನಗಳಿಗೂ ತಿಳಿಯಪಡಿಸುವದೇನಂದರೆ, ಬ್ಯಾಂಕ್‌ಮುಕಾಮಿನ ಪತ್ರಗಳ್ನು ಡಿಕರೀಗಳು ಫರ್‌ನೀಚರು ವಗ್ಯೈರೆ ಸಾಮಾನುಗಳು ಇವುಗಳನ್ನ ಡಿಸ್ಟ್ರಿಕ್ಟು ಜಡ್ಜ್ ಕೊರ್ಟು ಆರ್ಡರ್ ಮೇಲೆ 1884ನೇ ಇಸವಿ ಏಪ್ರೆಲ್ 17ನೇ ತಾರೀಖು ಲಾಗಾಯಿತು 21ನೇ ತಾರೀಖಿನ ವರಿಗೆ ದಿನವಹಿ ಮದ್ಯಾಹ್ನ 12 ಘಂಟೆ ಲಾಗಾಯಿತು ಸಾಯಿಂಕಾಲ 5 ಘಂಟೆವರಿಗೆ ಬ್ಯಾಂಕ್ ಹೌಸಿನಬಳಿ ಲಿಕ್ವಿಡೇಟರುಗಳಿಂದ ಹರಾಜು ಮಾಡಲ್ಪಡುವದು.

ಷರತ್ತು—ನಗದು ಹಣ.

ಇತರ ತಪಶೀಲ್‌ಗಳನ್ನು ಲಿಕ್ವಿಡೇಟರುಗಳಿಗೆ ಅಪ್ಲಿಕೇಷನ್ ಮೂಲಕ ತಿಳದುಕೊಳ್ಳಬಹುದು.

ಕೃಷ್ಣರಾವ್, ಲಿಕ್ವಿಡೇಟರ್.
ಶೇಷಾರಾಮಪ್ಪ, ಲಿಕ್ವಿಡೇಟರ್.

ತಪ್ಪು ಗುರಸ್ತು.

ಸ॥ 1884ನೇ ಇಸವಿ ಮಾರ್ಚೀ 22ನೇ ಮತ್ತು 12ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 103ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ ತುಮಕೂರು ಡಿಸ್ಟ್ರಿಕ್ಟಿನ ಅದೇ ಮಾಹೆ 9ನೇ ಮತ್ತು ಒಳ್ಳೆ ಇಸ್ತಿಹಾರ್‌ನಾಮೆಯ 2ನೇ ಪಚ್ತಿಯಲ್ಲಿ "ಶಿವಿಲ್ ಪ್ರೊಸೀಜ್ಯೂರ್ ಕೋಡಿನ" ಯಂಬಮಾತುಗಳಿಗೆ ಬದಲಾಗಿ "ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ" ಯಂಬದಾಗಿ ಪೋದಿಕೊಳ್ಳತಕ್ಕದ್ದು.